ಅಸಲು ದಾವಾ ನಂ. 148/2017
ಪಿ ಡಬ್ಲ್ಯು-1

ದಿನಾಂಕಃ 25-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ಪ್ರತಿವಾದಿ ನಂ.**1** ಮತ್ತು **2** ರವರ ಪರ ಶ್ರೀ. ವಿ ಬಿ ಟಿ ವಕೀಲರಿಂದ.

ದುರುಗಪ್ಪನಿಗೆ ಗಂಡು ಸಂತತಿ ಇರಲಿಲ್ಲ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರಿಯರ ಲಗ್ನವಾಗಿ 30 ವರ್ಷಗಳು ಆಗಿರುತ್ತದೆ. ದುರುಗಪ್ಪ ಯಾವ ದಿನಾಂಕದಂದು ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಪ್ರತಿವಾದಿಯರು ನನ್ನ ತಂದೆಗೆ ಗಂಡು ಮಕ್ಕಳು ಇಲ್ಲ ಎಂದು ಕಾಗದ ಪತ್ರ ಹುಟ್ಟಿಸಿಕೊಂಡಿರುತ್ತಾರೆ. ಹಾಗೇ ಖೊಟ್ಟಿ ಕಾಗದ ಪತ್ರ ಹುಟ್ಟಿಸಿಕೊಂಡ ಬಗ್ಗೆ ನನಗೆ ಈಗ 15 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಹಾಗೇ ಗೊತ್ತಾದ ನಂತರ ನಾನು ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಸವಣೂರು ಇವರಲ್ಲಿ ದಾವೆ ಸಲ್ಲಿಸಿದ್ದು ಇತ್ತು. ಹಾಗೇ ದಾವೆ ಸಲ್ಲಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಕಂದಾಯ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುವುದಾಗಿ ಸ್ವಂತಕ್ಕೆ ನುಡಿಯುತ್ತಾರೆ. ಹಾಗೇ ಪ್ರತಿವಾದಿಯರು ಯಾವ ಯಾವ ಕಾಗದ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದರು ಎಂದು ಹೇಳಲು ಬರುವುದಿಲ್ಲ. 2 ನೇ ಪ್ರತಿವಾದಿಯು ದಾವಾ ಆಸ್ತಿಗಳ ಪಹಣಿಗಳಲ್ಲಿ ಈಗ 15 ವರ್ಷಗಳ ಹಿಂದೆ ತನ್ನ ಹೆಸರು ಹಚ್ಚಿಕೊಂಡಿರುತ್ತಾನೆ. ಹಾಗೇ ಹೆಸರು ಹಚ್ಚಿಕೊಂಡ ನಂತರ ನಾವು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು 2 ನೇ ಪ್ರತಿವಾದಿಯ ಮಧ್ಯೆ ಹೆಸರು ಹಚ್ಚಿಕೊಳ್ಳಲು, ಪಾಲು ಮಾಡಿಕೊಳ್ಳಲು ಲಿಖಿತ ರೂಪದಲ್ಲಿ ಯಾವುದೇ ಕಾಗದ ಪತ್ರ ಆಗಿಲ್ಲ ಮತ್ತು ತಕರಾರು ಮಾಡಲು ಲಿಖಿತ ರೂಪದಲ್ಲಿ ಯಾವುದೇ ಕಾಗದ ಪತ್ರ ಆಗಿಲ್ಲ ಎಂದರೆ ಸರಿಯಲ್ಲ. 2 ನೇಪ್ರತಿವಾದಿ ದುರುಗಪ್ಪ ಇವರಿಗೆ ದತ್ತಕು ಹೋದ ಬಗ್ಗೆ ರದ್ದತಿ ಬೇಡಿ ಈ ದಾವೆ ಸಲ್ಲಿಸಿಲ್ಲ. ದುರುಗಪ್ಪ ಇವರ ಹೆಸರಿನಲ್ಲಿ ಇರುವ ಆಸ್ತಿಗಳು ಅವರು ಖರೀದಿ

ಹಿಡಿದ ಆಸ್ತಿಗಳು ಎಂದರೆ ಸರಿಯಲ್ಲ. ನಾವು ನಮ್ಮ ಗಂಡನ ಮನೆಯಲ್ಲಿ ವಾಸವಿರುವಾಗ 2 ನೇ ಪ್ರತಿವಾದಿಯೇ ದುರುಗಪ್ಪ ಇವರನ್ನು ದೇಕರೇಖಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದುರುಗಪ್ಪ 2 ನೇ ಪ್ರತಿವಾದಿಯವರನ್ನು ದತ್ತಕು ಪಡೆದ ನಂತರ 1 ನೇ ಪ್ರತಿವಾದಿಯೊಂದಿಗೆ ದುರುಗಪ್ಪ ಇವರನ್ನು ದೇಕರೇಖಿ ಮಾಡುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ದುರುಗಪ್ಪ 2 ನೇ ಪ್ರತಿವಾದಿಯವರನ್ನು ಯಾವ ದಿವಸ ದತ್ತು ಪಡೆದುಕೊಂಡರು, ಯಾವಾಗ ದತ್ತಕ ಪತ್ರ ನೋಂದಣಿ ಆಗಿರುತ್ತದೆ ಎಂಬ ಬಗ್ಗೆ ಗೊತ್ತಿಲ್ಲ. ಸಾಕ್ಷಿ ದತ್ತಕ ಪತ್ರವನ್ನು 2 ನೇ ಪ್ರತಿವಾದಿಯ ತಂದೆ ತಾಯಿ ಹುಟ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನಾಗಲೀ, ನನ್ನ ಸಹೋದರಿಯಾಗಲೀ, ಇಲ್ಲವೇ ಮೃತ ದುರುಗಪ್ಪನಾಗಲೀ ದತ್ತು ಪತ್ರ ಖೊಟ್ಟಿ ಇರುತ್ತದೆ ರದ್ದುಪಡಿಸಬೇಕು ಎಂದು ಎಲ್ಲಿಯೂ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದತ್ತಕ ಆದ ಬಗ್ಗೆ 2 ನೇ ಪ್ರತಿವಾದಿಯ ಹೆಸರು ಪಹಣಿಯಲ್ಲಿ ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. ದತ್ತಕ ಪತ್ರ ಮತ್ತು ಮೃತ್ಯುಪತ್ರ ಆದ ಬಗ್ಗೆ ನನಗೆ 25 ವರ್ಷಗಳ ಹಿಂದೆಯೇ ಗೊತ್ತಿತ್ತು ಎಂದರೆ ಸರಿಯಲ್ಲ.

2. 2 ನೇ ಪ್ರತಿವಾದಿ ದತ್ತಕ ಪತ್ರ ಮತ್ತು ಮೃತ್ಯುಪತ್ರ ಮಾಡಿಕೊಂಡ ಬಗ್ಗೆ ಉಪವಿಭಾಗಾಧಿಕಾರಿ ಇವರ ನ್ಯಾಯಾಲಯದಲ್ಲಿ ಅಪೀಲು ನಂ.132/1998-99 ಅಂತಾ ದಾಖಲು ಮಾಡಿದ್ದು ಇತ್ತು ಎಂದರೆ ಸರಿ. ಸಾಕ್ಷಿ ನಮಗೆ ಮರಿಯಪ್ಪ ಪಾಲು ನೀಡುತ್ತಾನೆ ಎಂದು ಹೇಳಿದ್ದರಿಂದ ಅದನ್ನು ಹಿಂಪಡೆದುಕೊಂಡಿರುವುದಾಗಿ ಸ್ವತಃ ನುಡಿಯುತ್ತಾರೆ. ಮರಿಯಪ್ಪ ಇವರಿಂದ ಹಾಗೇ ಪಾಲು ನೀಡುವ ಭದ್ರತೆಗಾಗಿ ಯಾವುದೇ ಲಿಖಿತ ಕಾಗದಪತ್ರ ಬರೆಯಿಸಿಕೊಂಡಿಲ್ಲ. ಮರಿಯಪ್ಪ ನಮಗೆ ಪಾಲು ನೀಡುವುದಾಗಿ ಯಾವ ಕಾಲಕ್ಕೂ ಹೇಳಿಲ್ಲ, ನಮ್ಮನ್ನು ಬೇಟಿ ಸಹ ಆಗಿಲ್ಲ ಎಂದರೆ ಸರಿಯಲ್ಲ.

3. ದುರುಗಪ್ಪನಿಗೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಹಿರೇಮುಗದೂರು ಗ್ರಾಮದಲ್ಲಿ ಚಾಕರಿ ಜಮೀನುಗಳು ಇದ್ದವು. ಹಾಗೇ ದುರುಗಪ್ಪನಿಗೆ ಚಾಕರಿ ಜಮೀನುಗಳು ಇದ್ದವು ಎಂಬುವುದಾಗಿ ನಾನು ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದುರುಗಪ್ಪ ತೀರಿಕೊಂಡಾಗ ಅವರಿಗೆ ಸುಮಾರು 55 ವರ್ಷ ವಯಸ್ಸು ಆಗಿತ್ತು. ಅವರು ಸಾಯುವಾಗ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಮೆದುಳು ಜ್ವರ ಬಂದು ಪಾರ್ಶ್ವವಾಯು ಆಗಿತ್ತು. ಹಾಗೇ ಮೆದುಳು ಜ್ವರ ಬಂದು ಪಾರ್ಶ್ವವಾಯು ಆಗಿದ್ದ ಬಗ್ಗೆ ವೈದ್ಯಕೀಯ ದಾಖಲೆ ಇಲ್ಲ. ದಾವಾದ ಜಮೀನನ್ನು ದುರುಗಪ್ಪ ಇವರು ದಿನಾಂಕ 22-04-1960 ರಂದು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿಯು ದುರುಗಪ್ಪ ಇವರ ಸ್ವಸಂಪಾದಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೇ ನಂ.39/2 ಕ ಇರುತ್ತದೆ. ಸದರಿ ಜಮೀನನ್ನು ಪಾಂಡುರಂಗ ಇವರ ಕಡೆಯಿಂದ ದುರುಗಪ್ಪ ಖರೀದಿ ಹಿಡಿದಿದ್ದರು ಎಂದರೆ ಸರಿಯಲ್ಲ.

4. 1 ನೇ ಪ್ರತಿವಾದಿಗೂ, ನಮಗೂ ದುರುಗಪ್ಪ 2 ನೇ ಪ್ರತಿವಾದಿಯನ್ನು ದತ್ತು ಪಡೆದುಕೊಂಡಿದ್ದರಿಂದ ಮನಸ್ತಾಪ ಇರುತ್ತದೆ ಎಂದರೆ ಸರಿಯಲ್ಲ. ದುರುಗಪ್ಪ ಮೃತನಾದ ನಂತರ ಅವರು ಮಾಡಿ ಇಟ್ಟ ಮೃತ್ಯುಪತ್ರದ ಪ್ರಕಾರ 2 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕನಾಗುತ್ತಾನೆ ಎಂದರೆ ಸರಿಯಲ್ಲ. ಈ ದಿನದವರೆಗೂ 2 ನೇ ಪ್ರತಿವಾದಿಯ ಹೆಸರು ಮೃತ್ಯುಪತ್ರದ ಆಧಾರದ ಮೇಲಿಂದ ಪಹಣಿಯಲ್ಲಿ ದಾಖಲು ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ದುರುಗಪ್ಪ ಇವರನ್ನು ಜೋಪಾನ ಮಾಡದೇ ಇದ್ದರೂ, 2 ನೇ ಪ್ರತಿವಾದಿಯಿಂದ ಆಸ್ತಿ ದುರುದ್ದೇಶದಿಂದ ಪಡೆಯಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳು ನನ್ನದಾಗಲೀ, ನನ್ನ ಸಹೋದರಿಯರದಾಗಲೀ, ಒಟ್ಟು

ಅಸಲು ದಾವಾ ನಂ. 148/2017
ಪಿ ಡಬ್ಲ್ಯು-1

ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಅವು ದುರುಗಪ್ಪ ಇವರ ಖರೀದಿ ಹಿಡಿದ ಆಸ್ತಿಗಳು ಎಂದರೆ ಸರಿಯಲ್ಲ. ನಾನಾಗಲೀ, ನನ್ನ ಸಹೋದರಿಯರಾಗಲೀ ದುರುಗಪ್ಪ ಇವರು ಮಾಡಿದ ಮೃತ್ಯುಪತ್ರವನ್ನು ರದ್ದುಪಡಿಸುವಂತೆ ದಾವೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ನಮ್ಮದು ಯಾವುದೇ ಹಕ್ಕು ಇಲ್ಲ, 2 ನೇ ಪ್ರತಿವಾದಿಯೇ ಅವುಗಳ ಮಾಲೀಕ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).